
# ಶ್ರೀರಾಮಕೃಷ್ಣರು ಮತ್ತು ಇತರ ಅವತಾರ ಪುರುಷರು

ಸ್ವಾಮಿ ಆತ್ಮಜ್ಞಾನಂದ



**ಈ** ಲೇಖನದ ಶೀರ್ಷಿಕೆಯೇ ಸೂಚಿಸುವಂತೆ ಅನೇಕ ಅವತಾರಪುರುಷರು ಇರುವ ಸಾಧ್ಯತೆಯಿದೆ ಹಾಗೂ ಅವರಲ್ಲಿ ವ್ಯತ್ಯಾಸಗಳೂ ಇವೆ. ಶ್ರೀರಾಮಕೃಷ್ಣರೂ ಅವತಾರಗಳಲ್ಲಿ ಒಬ್ಬರು ಹಾಗೂ ವಿಶಿಷ್ಟವಾದ ಕೆಲವು ಗುಣಗಳಿಂದ ಅವರು 'ಅವತಾರ ವರಿಷ್ಠ' ರು ಕೂಡ. ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು 'ಅವತಾರವರಿಷ್ಠ' ರೆಂದು ಅವರನ್ನು ಸ್ತುತಿಸಿದ್ದಾರೆ. ಗುರುಭಕ್ತಿಯ ಅತಿರೇಕವೋ, ಭಾವುಕತೆಯ ಅಭಿವ್ಯಕ್ತಿಯೋ ಈ ಸ್ತುತಿಯ ಪ್ರೇರಕ ಶಕ್ತಿಯಲ್ಲ. ಎಲ್ಲವನ್ನೂ ವಿಚಾರದ ತೀಕ್ಷ್ಣ ಪರೀಕ್ಷೆಗೆ ಒಡ್ಡಿಯೇ ಸ್ವೀಕರಿಸುತ್ತಿದ್ದ ವಿವೇಕಾನಂದರಿಗೆ ಶ್ರೀರಾಮಕೃಷ್ಣರು ಅವತಾರವೋ ಇಲ್ಲವೋ ಎಂಬುದರ ಬಗ್ಗೆ ಅನೇಕ ವರ್ಷಗಳ ಕಾಲ ಸಂದೇಹಗಳಿದ್ದವು. ಗಂಟಲುಬೇನೆಯಿಂದ ನರಳುತ್ತಿದ್ದ ಶ್ರೀರಾಮಕೃಷ್ಣರನ್ನು ಕಂಡು ನರೇಂದ್ರನಾಥ ಅಂದುಕೊಂಡ, "ಈ ನೋವಿನ ಬಾಧೆಯಿಂದ ನರಳುತ್ತಿರುವಾಗ ತಾವು ಅವತಾರ ವೆಂದು ಸಾರಲು ಇವರಿಗೆ ಸಾಧ್ಯವೇ?" ಅವನ ಮನಸ್ಸಿನಲ್ಲಿ ಎದ್ದಿದ್ದ ಸಂಶಯವನ್ನು ಕೂಡಲೇ ಅರಿತುಕೊಂಡ ಶ್ರೀರಾಮಕೃಷ್ಣರು ಸ್ಪಷ್ಟವಾಗಿ ಹೇಳಿದರು, "ಯಾರು ರಾಮನಾಗಿ ಬಂದಿದ್ದನೋ, ಯಾರು ಕೃಷ್ಣನಾಗಿ ಬಂದಿದ್ದನೋ, ಅವನೇ ಈಗ ರಾಮಕೃಷ್ಣನಾಗಿ ಇಲ್ಲಿ ಇರುವನು. ಆದರೆ ಇದು ನಿನ್ನ ವೇದಾಂತದ ದೃಷ್ಟಿ ಯಿಂದಲ್ಲ" ಎಂದು. ವೇದಾಂತದ ಮತದಂತೆ ಎಲ್ಲ ಜೀವಿಗಳೂ ಒಂದೇ ಪರಬ್ರಹ್ಮವಸ್ತುವಿನ ಅಭಿವ್ಯಕ್ತಿ. ರೂಪಗಳಲ್ಲಿನ ಭಿನ್ನತೆ, ನಾಮಗಳ ಪ್ರತ್ಯೇಕತೆ –ಇವೆಲ್ಲ ಅಜ್ಞಾನಜನಿತ ದೃಷ್ಟಿದೋಷಗಳು.

> ಶ್ರೀರಾಮಕೃಷ್ಣ ಅವತಾರವು ಹಿಂದಿನ ಅವತಾರಗಳಿಗಿಂತ ವಿಶಿಷ್ಟ ವಾದುದು, ವಿನೂತನವಾದುದು. ಆಧುನಿಕ ಯುಗದ ಅವತಾರ ಪುರುಷರಾದ ಶ್ರೀರಾಮಕೃಷ್ಣರ ಮಹತ್ವವನ್ನು ಕೂಲಂಕಷವಾಗಿ ವಿವರಿಸಿರುವ ಪೂಜ್ಯ ಸ್ವಾಮೀಜಿಯವರು, ವಿವೇಕಪ್ರಭ ಪತ್ರಿಕೆಯ ಹಿಂದಿನ ಸಂಪಾದಕರು. ಪ್ರಸ್ತುತ ಅವರು ಕೊಲ್ಕತಾದ ಅದ್ವೈತ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀರಾಮಕೃಷ್ಣರ ಮಾತುಗಳನ್ನು ಗಮನಿಸಿ ನೋಡಿ. "ಯಾರು ರಾಮನಾಗಿ ಬಂದಿದ್ದನೋ, ಯಾರು ಕೃಷ್ಣನಾಗಿ ಬಂದಿದ್ದನೋ ಅವನೇ ಈಗ ಈ ರೂಪದಲ್ಲಿದ್ದಾನೆ." ಹಾಗಿದ್ದರೆ ಶ್ರೀರಾಮಕೃಷ್ಣ ರಿಗೂ ರಾಮ, ಕೃಷ್ಣ ಅವತಾರಗಳಿಗೂ ನಾವು ಯಾವ ವ್ಯತ್ಯಾಸ ವನ್ನೂ ಮಾಡಬಾರದು. ಶ್ರೀರಾಮ ಹಾಗೂ ಶ್ರೀಕೃಷ್ಣ ಅಸುರರನ್ನು ಸಂಹರಿಸಿದರು, ಯುದ್ಧಗಳನ್ನು ಮಾಡಿದರು, ರಾಜ್ಯಗಳನ್ನು ಆಳಿದರು, ದಿವ್ಯ ಅಸ್ತ್ರಗಳನ್ನು ವರಗಳಾಗಿ ಪಡೆದಿದ್ದರು. ಶ್ರೀರಾಮ ಕೃಷ್ಣರಲ್ಲಿ ಇವಾವುದೂ ಇಲ್ಲವಲ್ಲ! ಜಗನ್ಮಾತೆ ಕೊಡಬಂದ ಅಷ್ಟಸಿದ್ಧಿ ಗಳನ್ನೂ ಕೂಡ ಇವರು ತಿರಸ್ಕರಿಸಿದರಲ್ಲವೇ!

ಬಡ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ, ಲೌಕಿಕ ವಿದ್ಯೆ ಯನ್ನಾಗಲೀ, ಪಾಂಡಿತ್ಯವನ್ನಾಗಲೀ ಗಳಿಸದೆ, ಯಾವ ಬಾಹ್ಯ ಆಡಂಬರವೂ ಇಲ್ಲದೆ, ಸಾಧಾರಣ ಪೂಜಾರಿಯಾಗಿದ್ದು ಸಾಧನೆ ಗಳನ್ನು ಮಾಡಿದ ಶ್ರೀರಾಮಕೃಷ್ಣರು, ದೈವೋನ್ಮಾದದ ಹೊಳೆಯಲ್ಲಿ ಕೊಚ್ಚಿಹೋಗಿ ಸಮಾಧಿಯನ್ನು ಹೊಂದಿದರು. ಇವರಲ್ಲಿ ಬೇರೆ ಅವತಾರಗಳಲ್ಲಿ ಕಂಡುಬರುವ **'ಭಗ'** ಅಥವಾ ಶಕ್ತಿ–ಐಶ್ವರ್ಯಗಳ ಪ್ರಕಾಶವೂ ಇಲ್ಲವಲ್ಲ ಎಂಬ ಸಂಶಯ ಬರುವುದು ಸಹಜ. ಹೀಗಿರುವಾಗ ಶ್ರೀರಾಮಕೃಷ್ಣರ ಅನುಭವಗಳಿಂದಲೇ ನಾವು ಅವರನ್ನು ತಿಳಿಯಬೇಕಾಗಿ ಬರುತ್ತದೆ. ಶ್ರೀರಾಮಕೃಷ್ಣರು ಮಾಸ್ಟರ ರಿಗೆ (ಮಹೇಂದ್ರನಾಥ ಗುಪ್ತ) ಒಮ್ಮೆ ಹೇಳಿದರು, "ಇಲ್ಲಿ ಹೊರಗಿನವರೆಂಬುವವರು ಯಾರೂ ಇಲ್ಲ. ಅಂದು, ಹರೀಶ ನನ್ನೊಡನೆ ಇದ್ದಾಗ, ಸಚ್ಚಿದಾನಂದ ಈ ಕೋಶದಿಂದ (ಪರಮ ಹಂಸರ ಶರೀರದಿಂದ) ಹೊರಕ್ಕೆ ಬರುವುದನ್ನು ನೋಡಿದೆ. ಆತ ಹೊರಕ್ಕೆ ಬಂದು ಹೇಳಿದ, 'ನಾನು ಪ್ರತಿಯೊಂದು ಯುಗ ದಲ್ಲಿಯೂ ಅವತರಿಸುತ್ತೇನೆ' ಅಂತ. ಆಗ ಭಾವಿಸಿದೆ, ಬಹುಶಃ ಚಿತ್ತಭ್ರಮಣೆಯಿಂದ ನಾನು ಹೀಗೆ ಹೇಳುತ್ತಿರಬಹುದು ಎಂದು...."

ಒಂದು ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದು ಮಾಸ್ಟರರನ್ನು ಸಂಬೋಧಿಸಿ ಮತ್ತೆ ಅವನಿಗೆ ಹೇಳಿದರು,"ಪೂರ್ಣ ಆವಿರ್ಭಾವವಾಗಿ ಕಂಡಿತು; ಆದರೆ ಈ ಸಲ ಅದು ಸತ್ವಗುಣದ ಐಶ್ವರ್ಯಮಾತ್ರ" (ಶ್ರೀರಾಮಕೃಷ್ಣ ವಚನವೇದ, ಭಾಗ ೨, ಪುಟ ೨೪೧). ಮತ್ತೊಂದೆಡೆ ಶ್ರೀರಾಮಕೃಷ್ಣರು ಹೇಳುತ್ತಾರೆ, "ಅಂತರ್ಯದಲ್ಲೂ ಮತ್ತು ಹೊರಗೂ ಅಖಂಡ ಸಚ್ಚಿದಾನಂದ. ಒಳಗೆ, ಹೊರಗೆ–ಎರಡು ಕಡೆಯಲ್ಲೂ ಇದ್ದಾನೆ. ಆತ ನೆಪಮಾತ್ರಕ್ಕೆ ಈ ಬಲವನ್ನೂ (ತಮ್ಮ ಶರೀರವನ್ನು ತೋರಿಸಿ) ಆಶ್ರಯಿಸಿ ಇದರ ಒಳಗೆ ಮತ್ತು ಹೊರಗೆ ಇದ್ದಾನೆ. ಇದು ನನಗೆ ಸ್ಪಷ್ಟವಾಗಿ ಕಾಣುತ್ತಿದೆ" (ಅದೇ, ಪುಟ ೬೧೮).

ಧರ್ಮಗ್ಲಾನಿಯನ್ನು ಹೋಗಲಾಡಿಸಿ, ಮಾನವನು ಧರ್ಮಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡುವುದು, ಯುಗಧರ್ಮವನ್ನು ತನ್ನ ಜೀವನ ಹಾಗೂ ಉಪದೇಶಗಳ ಮೂಲಕ ಪುನರುಜ್ಜೀವನಗೊಳಿಸುವುದು, ದುಷ್ಟಶಿಕ್ಷಣ ಹಾಗೂ ಶಿಷ್ಟರಕ್ಷಣಗಳನ್ನು ಕೈಗೊಂಡು ಆಧ್ಯಾತ್ಮಿಕ ಪಿಪಾಸುಗಳಿಗೆ, ಶ್ರದ್ಧೆಯುಳ್ಳವರಿಗೆ ಸುಲಭಸಾಧ್ಯನಾಗುವುದೇ ಅವತಾರಪುರುಷನ ಇಹಲೋಕದ ಕಾರ್ಯಗಳು. ಇತರ ಜೀವಿಗಳಂತೆ ಯಾವುದೇ ಕರ್ಮಗಳಿಗೆ ಬದ್ಧನಾಗಿ ಜನಿಸದೆ, ಸ್ವೇಚ್ಛೆ ಹಾಗೂ ಅಪಾರ ಕರುಣೆಯಿಂದ ಭಕ್ತರನ್ನು ಉದ್ಧರಿಸಲು ಆ ಪರಬ್ರಹ್ಮ ಸಚ್ಚಿದಾನಂದನೇ ಧರೆಗಿಳಿದು ಬರುತ್ತಾನೆ. ಆ ಅನಂತನೂ, ನಿರಾಕಾರ–ನಿರ್ಗುಣನೂ ಆದ ಪರಬ್ರಹ್ಮನು ಹೇಗೆ ಮಾನವಶರೀರದಲ್ಲಿ ಆವಿರ್ಭವಿಸುವನು ಎಂಬುದು ನಮ್ಮ ಸೀಮಿತ ಬುದ್ಧಿಗೆ ನಿಲುಕದ ವಿಷಯ. ನಮ್ಮ ಅನಿಸಿಕೆಗಳಿಗೆ, ವಿಚಾರಗಳಿಗೆ, ಬದ್ಧನಲ್ಲವಲ್ಲ ಆ ಭಗವಂತ! ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳುತ್ತಾನೆ: "ದೇವತಾಗಣಗಳಾಗಲೀ ಮಹರ್ಷಿಗಳಾಗಲೀ ನನ್ನ ಉತ್ಪತ್ತಿಯನ್ನು ಅರಿಯರು. ಏಕೆಂದರೆ ನಾನು (ಎಲ್ಲಾ) ದೇವತೆಗಳಿಗೂ, ಮಹರ್ಷಿಗಳಿಗೂ, ಸರ್ವಪ್ರಕಾರದಿಂದಲೂ ಆದಿಯಾಗಿರುತ್ತೇನೆ" (ಭಗವದ್ಗೀತಾ, ೧೦.೨). ಅನೇಕ ಜನ ತಮ್ಮಂತೆಯೇ ಈತನೂ ಮನುಷ್ಯನೆಂದು ತಿಳಿದು, ಶ್ರದ್ಧೆಯಿಲ್ಲದೆ, ತಮ್ಮ ಜೀವನದಲ್ಲಿ ಅವನನ್ನು ಬರಮಾಡಿಕೊಳ್ಳದೇ ಜೀವನವನ್ನು ವ್ಯರ್ಥವಾಗಿಸಿಕೊಳ್ಳುವರು. "ನನ್ನ ಪರಭಾವವನ್ನು ಅರಿಯದ ಮೂಢರು ಮನುಷ್ಯ ದೇಹವನ್ನು ಆಶ್ರಯಿಸಿರುವ ನನ್ನನ್ನು ತಿರಸ್ಕರಿಸುತ್ತಾರೆ" (ಭಗವದ್ಗೀತಾ, ೯.೧೧). ಸಾಮಾನ್ಯ ಜೀವಿಯು ಮಾಯಾಪಾಶಕ್ಕೆ ಬದ್ಧನಾಗಿರುತ್ತಾನೆ, ಆದರೆ ಅವತಾರ ಪುರುಷನು ಮಾಯಾಧೀಶ. ಯಾವುದೇ ಕಾಮನೆಗಳಿಲ್ಲದೆ ಕೇವಲ ಧರ್ಮರಕ್ಷಣೆಯ ಉದ್ದೇಶದಿಂದ ದೇಹ ಧರಿಸಿ ಬರುವ ಭಗವಂತನನ್ನು ತಿಳಿಯುವುದೆಂತು?

ಶ್ರೀರಾಮಕೃಷ್ಣರು ಭಾವಾವೇಶದಲ್ಲಿ ಬಟ್ಟೆ, ಜನಿವಾರ ತೆಗೆದು ಹಾಕುವುದು ಅವರ ಚಿಕ್ಕಪ್ಪನ ಮಗ ಹಲಧಾರಿಗೆ ಹಿಡಿಸುತ್ತಿರಲಿಲ್ಲ. ಅವರೊಬ್ಬ ಸ್ವೇಚ್ಛಾಚಾರಿ, ಹುಚ್ಚ ಎಂದು ಅವನು ಭಾವಿಸುತ್ತಿದ್ದ. ಆದರೆ ಪೂಜೆಯನ್ನು ಮಾಡುವಾಗ ಅವರು ಪ್ರೇಮಾಶ್ರುವನ್ನು ಹರಿಸುತ್ತಿದುದನ್ನು ನೋಡಿ, ಅವರ ತೀವ್ರ ವ್ಯಾಕುಲತೆಯನ್ನು ಕಂಡು ಅವರು ಅಸಾಧಾರಣ ವ್ಯಕ್ತಿಯೆಂಬ ಭಾವನೆಯೂ ಆಗಾಗ ಅವನಿಗೆ ಬರುತ್ತಿತ್ತು. ಈ ರೀತಿ ಹಲಧಾರಿಯ ಮನಸ್ಸು ಸಂದೇಹದಿಂದ ಡೋಲಾಯಮಾನವಾಗಿತ್ತು. ಶ್ರೀರಾಮಕೃಷ್ಣರ ಬಗ್ಗೆ ಒಂದು ನಿರ್ದಿಷ್ಟ ನಿರ್ಣಯಕ್ಕೆ ಬರಲು ಅವನಿಗೆ ಸಾಧ್ಯವಾಗಲಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಎಷ್ಟೋ ಬಾರಿ ನಾನು ಪೂಜೆ ಮಾಡುವುದನ್ನು ನೋಡಿ ಮೋಹಿತನಾಗಿ ಹಲಧಾರಿ ಹೇಳುತ್ತಿದ್ದ, 'ರಾಮಕೃಷ್ಣ, ಈಗ ನಿನ್ನನ್ನು ಗುರುತಿಸಿಬಿಟ್ಟೆ' ಎಂದು. ಅದನ್ನು ಕೇಳಿ ನಾನು ಹಾಸ್ಯಕ್ಕಾಗಿ ಹೇಳುತ್ತಿದ್ದೆ, 'ನೋಡು, ಮತ್ತೆ ನೀನು ಗೊಂದಲಕ್ಕೀಡಾಗಬಹುದು.' ಅದಕ್ಕವನು ಹೇಳುತ್ತಿದ್ದ, 'ಈ ಬಾರಿ ನೀನು ನನ್ನನ್ನು ಮೋಸಪಡಿಸಲಾರೆ. ನಿನ್ನಲ್ಲಿ ನಿಜವಾಗಿಯೂ ಈಶ್ವರೀಯ ಭಾವ ಉಂಟಾಗಿದೆ. ಈಗ ಸರಿಯಾಗಿ ನಿನ್ನನ್ನು ಅರ್ಥ ಮಾಡಿಕೊಂಡಿದ್ದೇನೆ. ಅನಂತರ ದೇವಸ್ಥಾನದ ಕೆಲಸವನ್ನೆಲ್ಲ ಮುಗಿಸಿ ನಶ್ಯ ಮೂಗಿಗೇರಿಸಿ ಭಗವದ್ಗೀತೆ ರಾಮಾಯಣ ಮೊದಲಾದ ಶಾಸ್ತ್ರಗಳ ಅಧ್ಯಯನಕ್ಕೆ ಕುಳಿತನೆಂದರೆ ಅಭಿಮಾನದಿಂದ ಉಬ್ಬಿಹೋಗಿ ಬೇರೆಯ ವ್ಯಕ್ತಿಯೇ ಆಗಿಬಿಡುತ್ತಿದ್ದ. ಆಗ ನಾನು ಅವನ ಹತ್ತಿರ ಹೋಗಿ ಹೇಳುತ್ತಿದ್ದೆ, 'ನೀನು ಶಾಸ್ತ್ರದಲ್ಲಿ ಏನೇನು ಓದಿರುವೆಯೋ ಅದನ್ನೆಲ್ಲ ನಾನು ಪಡೆದುಬಿಟ್ಟಿದ್ದೇನೆ. ನನಗೆ ಅವೆಲ್ಲ ಅರ್ಥವಾಗುತ್ತದೆ.' ಅವನು ರೇಗಿ ಹೇಳುತ್ತಿದ್ದ, 'ಹಾಂ, ನೀನು ಶುದ್ಧ ಮೂರ್ಖ, ನಿನಗೆ ಇವೆಲ್ಲ ಹೇಗೆ ಅರ್ಥವಾಗುತ್ತವೆ?' ನಾನು ಹೇಳುತ್ತಿದ್ದೆ, (ತಮ್ಮ ದೇಹವನ್ನು ನಿರ್ದೇಶಿಸಿ) 'ಸತ್ಯವಾಗಿ ಹೇಳುತ್ತೇನೆ. ಇದರೊಳಗೆ ಯಾವನಿರುವನೋ ಅವನು ಇವೆಲ್ಲವನ್ನು ತಿಳಿಸಿಕೊಡುವನು. ನೀನು ಆಗ ಹೇಳಿದೆಯಲ್ಲ, ಇದರೊಳಗೆ ಈಶ್ವರಭಾವವಿದೆ ಎಂದು. ಅದೇ ಎಲ್ಲವನ್ನು ತಿಳಿಸಿಕೊಡುವುದು.' ಹಲಧಾರಿಯು ಇದನ್ನು ಕೇಳಿ ಕೋಪದಿಂದ ಹೇಳುತ್ತಿದ್ದ, 'ಹೋಗು, ಮೂರ್ಖ, ಕಲಿಯುಗದಲ್ಲಿ ಕಲ್ಕಿ ಅವತಾರವಿಲ್ಲದೆ ಬೇರೆ ಯಾವ ಅವತಾರಗಳ ವಿಷಯವೂ ಶಾಸ್ತ್ರದಲ್ಲಿಲ್ಲ. ನಿನಗೆ ಹುಚ್ಚು ಹಿಡಿದಿದೆ. ಅದಕ್ಕೇ ಹೀಗೆಲ್ಲ ಭಾವಿಸುತ್ತೀಯೆ. ಆಗ ನಾನು ನಕ್ಕು ಹೇಳುತ್ತಿದ್ದೆ, 'ಸ್ವಲ್ಪ ಮುಂಚೆ ಹೇಳುತ್ತಿದ್ದೆ, ಇನ್ನು ಗೊಂದಲಕ್ಕೊಳಗಾಗುವುದಿಲ್ಲ

> ಶ್ರೀರಾಮಕೃಷ್ಣರಲ್ಲಿ ವ್ಯಕ್ತವಾಗಿರುವ ದಿವ್ಯಶಕ್ತಿಯು ಅಪೂರ್ವವಾದುದು. ಹಲವು ಶತಮಾನಗಳಿಂದ ಜಗತ್ತು ಇಂತಹ ಅಭಿವ್ಯಕ್ತಿಯನ್ನು ಕಂಡಿಲ್ಲ. ಅವರ ಅವತರಣದಿಂದ ಆಧ್ಯಾತ್ಮಿಕತೆಯ ಪ್ರವಾಹವು ಅವ್ಯಾಹತವಾಗಿ, ಬಹುಕಾಲದವರೆಗೆ ಪ್ರಪಂಚದಾದ್ಯಂತ ಇನ್ನು ಮುಂದೆ ಹರಿಯತೊಡಗುವುದು... ಗುರುದೇವರು ಎಲ್ಲ ದೇವತೆಗಳ ಮತ್ತು ಒಳಿತಿನ ಪ್ರತಿರೂಪವಾಗಿದ್ದಾರೆ. ಹಿಂದೆ ಹುಟ್ಟಿ ಬಂದಿದ್ದ ಎಲ್ಲ ದಿವ್ಯ ಅವತಾರಗಳೂ ಮತ್ತು ಮುಂದೆ ಬರುವ ಎಲ್ಲ ಅವತಾರಗಳೂ ಗುರುದೇವರಲ್ಲಿಯೇ ಅಂತರ್ಗತವಾಗಿವೆ. ಆದ್ದರಿಂದ ನೀನು ಗುರುದೇವರನ್ನು ಧ್ಯಾನಿಸುವುದೆಂದರೆ, ಆ ಎಲ್ಲ ದಿವ್ಯಸ್ವರೂಪಗಳನ್ನೂ ಧ್ಯಾನಿಸಿದಂತೆಯೇ. ಆದರೆ ಆ ಅರಿವು ನಿನಗಿರಬೇಕು.
>
> **– ಸ್ವಾಮಿ ಶಿವಾನಂದ**

ಎಂದು?' ಆದರೆ ಆ ಮಾತನ್ನು ಕೇಳುವವರಾರು?" (ಶ್ರೀರಾಮಕೃಷ್ಣ ಲೀಲಾಪ್ರಸಂಗ ಭಾಗ-೧, ಪುಟ ೧೭೧-೨).

ಅವತಾರಪುರುಷನನ್ನು ಗುರುತಿಸುವುದು ಕಷ್ಟಸಾಧ್ಯ ಹಲಧಾರಿಯ ಸ್ಥಾನದಲ್ಲಿ ನಾವೇನಾದರೂ ಇದ್ದಿದ್ದರೆ ನಮಗೂ ಅದೇ ಗತಿಯಾಗುತ್ತಿತ್ತು. ಕೆಲವೊಮ್ಮೆ ಭಾವುಕರಾಗಿ ನಾವು ಭಾವಿಸಬಹುದು, "ಅಯ್ಯೋ! ಇನ್ನು ಸ್ವಲ್ಪ ಮುಂಚೆ ಜನ್ಮ ತಾಳಿದ್ದರೆ ನಾವೂ ಶ್ರೀರಾಮಕೃಷ್ಣರನ್ನೋ, ವಿವೇಕಾನಂದರನ್ನೋ ನೋಡಬಹುದಿತ್ತಲ್ಲ!" ಎಂದು. ಆದರೆ ಶ್ರೀಕೃಷ್ಣ ಹೇಳುವಂತೆ, "ಯೋಗಮಾಯೆಯಿಂದ ಆವೃತನಾದ ನಾನು ಎಲ್ಲರಿಗೂ ಪ್ರತ್ಯಕ್ಷನಲ್ಲ. (ಆದುದರಿಂದ) ಈ ಮೂಢಜನರು ಅಜನೂ ಅವ್ಯಯನೂ ಆದ ನನ್ನನ್ನು ಅರಿಯರು." (ಗೀತಾ ೭.೨೫)

ಶ್ರೀರಾಮಕೃಷ್ಣರಲ್ಲಿ ಕಂಡು ಬರುವ ವಿಶೇಷ ಗುಣಗಳನ್ನು ಕುರಿತು ಆಲೋಚಿಸೋಣ. ಮೊದಲ ನೋಟಕ್ಕೆ ಕಂಡುಬರುವುದು ಅವರ ಅತ್ಯಂತ ಸರಳ ವ್ಯಕ್ತಿತ್ವ, ನಿರಭಿಮಾನ ಹಾಗೂ ಅಸಾಧಾರಣ ವಿನಯ. ತಾನೊಬ್ಬ ಅವತಾರಪುರುಷನೆಂದಾಗಲೀ, ಗುರುವೆಂದಾಗಲೀ ಅವರೆಂದೂ ಹೇಳಿಕೊಳ್ಳುತ್ತಿರಲಿಲ್ಲ. ತಮ್ಮ ಅಂತರಂಗ ಶಿಷ್ಯರಿಗೆ, ಭಕ್ತರಿಗೆ ಅವರವರ ಭಾವಕ್ಕೆ ತಕ್ಕಂತೆ ಸ್ಪಂದಿಸುತ್ತ ಆಗೊಮ್ಮೆ ಈಗೊಮ್ಮೆ ಅವರು ತಮ್ಮ ನಿಜ ಸ್ವರೂಪವನ್ನು ವ್ಯಕ್ತಪಡಿಸುತ್ತಿದ್ದರು. ಒಮ್ಮೆ ಶ್ರೀರಾಮಕೃಷ್ಣರು ವೈಕುಂಠನಾಥ ಸನ್ಯಾಲನಿಗೆ ಹೇಳಿದರು, "ನೋಡು, ಭೈರವಿ ಬ್ರಾಹ್ಮಣಿ, ವೈಷ್ಣವ ಚರಣ, ಇಂದೇಶದ ಗೌರೀ ಪಂಡಿತ, ಬರ್ದವಾನಿನ ರಾಜ ಪಂಡಿತ ಪದ್ಮಲೋಚನ – ಇವರೆಲ್ಲ ನನ್ನನ್ನು ಅವತಾರ ಎಂದು ಕರೆದಿದ್ದಾರೆ. ಈಗ ಗಿರೀಶ, ರಾಮ ಮತ್ತು ಮನಮೋಹನರೂ ನನ್ನನ್ನು ಅವತಾರ ಎಂದು ಹೇಳುತ್ತಾರೆ. ಇದನ್ನೆಲ್ಲ ಕೇಳಿ ನನಗೆ ಜುಗುಪ್ಸೆ ಬಂದಿದೆ. ಹೋಗಲಿ, ನನ್ನ ಬಗ್ಗೆ ನಿನ್ನ ಅಭಿಪ್ರಾಯ ಏನು?"

**ವೈಕುಂಠ:** "ನಿಮ್ಮನ್ನು ಅವತಾರ ಎಂದು ಕರೆದವರೆಲ್ಲ ನೀಚರು."

**ಶ್ರೀರಾಮಕೃಷ್ಣರು (ನಗುತ್ತ):** "ನೀನೇನು ಹೇಳುತ್ತಿರುವೆ? ನಾನು ಅವತಾರ ಎಂದು ಅವರು ನನ್ನನ್ನು ಹೊಗಳಿದರು! ಅಂತಹವರನ್ನು ನೀನು ನೀಚರು ಎನ್ನುತ್ತಿರುವೆ!"

**ವೈಕುಂಠ :** "ನನಗೆ ತಿಳಿದಿರುವಂತೆ, ಅವತಾರನು ಭಗವಂತನ ಒಂದು ಅಂಶ ಮಾತ್ರ, ಪೂರ್ಣರೂಪವಲ್ಲ."

**ಶ್ರೀರಾಮಕೃಷ್ಣರು:** "ನೀನು ಸರಿಯಾಗಿ ಹೇಳಿದೆ. ಆದರೆ ನನ್ನ ಬಗ್ಗೆ ನಿನ್ನ ಅನಿಸಿಕೆ ಏನು?"

**ವೈಕುಂಠ:** "ನೀವು ಸಾಕ್ಷಾತ್ ಪರಮೇಶ್ವರ, ಕೇವಲ ಅವನ ಒಂದಂಶವಲ್ಲ. ನೀವು ನನಗೆ ಶಿವನ ಮೇಲೆ ಧ್ಯಾನ ಮಾಡಲು ಹೇಳಿದ್ದಿರಿ. ಪ್ರತಿನಿತ್ಯ ಪ್ರಯತ್ನಿಸುತ್ತಿದ್ದರೂ ನನ್ನಿಂದ ಅದು ಸಾಧ್ಯವಾಗುತ್ತಿಲ್ಲ. ನಾನು ಧ್ಯಾನಕ್ಕೆ ಕುಳಿತಾಗಲೆಲ್ಲ ನಿಮ್ಮ ಆನಂದ ಮಯವೂ ಪ್ರೇಮಮಯವೂ ಆದ ಮುಖ ನನ್ನ ಮುಂದೆ ಪ್ರಕಾಶಮಾನವಾಗಿ ಗೋಚರಿಸುತ್ತದೆ. ಅದನ್ನು ಶಿವನ ಆಕಾರ ದಿಂದ ಸ್ಥಾನಾಂತರಿಸಲು ಪ್ರಯತ್ನಿಸಿ ವಿಫಲನಾಗಿರುವೆ. ಹಾಗೆ ಮಾಡಲು ನನಗೆ ಇಷ್ಟವೂ ಇಲ್ಲ. ಆದ್ದರಿಂದ ನಿಮ್ಮನ್ನು ಸಾಕ್ಷಾತ್ ಶಿವ ಎಂದೇ ತಿಳಿದಿರುವೆ."

**ಶ್ರೀರಾಮಕೃಷ್ಣರು (ನಗುತ್ತ) :** "ಹಾಗೇನು? ಆದರೆ ನನಗೆ ಗೊತ್ತಿದೆ, ನಾನು ನಿನ್ನ ತಲೆಯ ಒಂದು ಕೂದಲಿಗಿಂತ ಹೆಚ್ಚೇನಲ್ಲ ಎಂಬುದು." (How to live with God, ಪುಟ ೨೮)

ರಾಮ ಮತ್ತು ಕೃಷ್ಣರು ತಮ್ಮ ಸೌಂದರ್ಯಕ್ಕೂ ಪ್ರಸಿದ್ಧರಾಗಿದ್ದರು. ಜನರು ಅವರ ಸೌಂದರ್ಯದಿಂದ ಆಕರ್ಷಿತರಾಗುತ್ತಿದ್ದರು. ಆದರೆ ಶ್ರೀರಾಮಕೃಷ್ಣರ ಜೀವನದಲ್ಲಿ ನಾವು ಕಾಣುವುದೇನು? ಶ್ರೀರಾಮಕೃಷ್ಣರೇ ಹೇಳುತ್ತಿದ್ದರು, "ಆಗ (ಒಂದು ಕಾಲದಲ್ಲಿ) ನನ್ನ ರೂಪ ಎಷ್ಟು ಸುಂದರವಾಗಿತ್ತೆಂದರೆ ಜನರು ಎವೆಯಿಕ್ಕದೆ ನನ್ನನ್ನು ನೋಡುತ್ತಿದ್ದರು. ಎದೆ, ಮುಖ ಎಲ್ಲ ಕೆಂಪಾಗಿರುತ್ತಿತ್ತು. ದೇಹದಿಂದ ಬೆಳಕು ಹೊರಬರುವಂತೆ ಕಾಣುತ್ತಿತ್ತು. ಜನರೆಲ್ಲ ನೋಡುತ್ತಿರುತ್ತಾರೆಂದು ಒಂದು ಮೇಲ್ವಸ್ತ್ರದಿಂದ ದೇಹವನ್ನು ಮುಚ್ಚಿಕೊಂಡಿರುತ್ತಿದ್ದೆ. ತಾಯಿಗೆ ಹೇಳುತ್ತಿದ್ದೆ, 'ತಾಯಿ, ನಿನ್ನ ಈ ಬಾಹ್ಯರೂಪವನ್ನು ನೀನೇ ತೆಗೆದುಕೋ, ನನಗೆ ಆಂತರಿಕ ಸೌಂದರ್ಯವನ್ನು ಕೊಡು.' ನನ್ನ ದೇಹದ ಮೇಲೆ ಕೈ ಆಡಿಸುತ್ತ ಮತ್ತೆ ಮತ್ತೆ ಹೊಡೆಯುತ್ತ, 'ಒಳಗೆ ಹೋಗು' ಎಂದು ಹೇಳುತ್ತಿದ್ದೆ. ಬಹಳ ದಿನದ ನಂತರ ಮೈಕಾಂತಿಯು ಅಡಗಿ ಬಾಹ್ಯರೂಪವು ಈಗಿನಂತೆ ಸಾಮಾನ್ಯ ಸ್ಥಿತಿಗೆ ಬಂತು" (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೧, ಪುಟ ೫೦೨).

ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಸೌಂದರ್ಯದಿಂದ ಮಾತ್ರ ಜನರನ್ನು ಆಕರ್ಷಿಸಿದರು. ಬ್ರಾಹ್ಮಸಮಾಜದ ಪ್ರಮುಖನಾಗಿದ್ದ ಕೇಶವಚಂದ್ರಸೇನ ಸುಂದರ ವ್ಯಕ್ತಿತ್ವವನ್ನು, ಉತ್ತಮ ವಾಗ್ಮಿತ್ವವನ್ನು ಹೊಂದಿದ್ದ. ಆದರೇನು? ಅವನ ಅನುಯಾಯಿಗಳಲ್ಲಿ ಒಳಜಗಳ ಪ್ರಾರಂಭವಾಯಿತು. ಕೇಶವನೇ ಶ್ರೀರಾಮಕೃಷ್ಣರ ಶಿಷ್ಯನಾದ. ಅಷ್ಟೇ ಅಲ್ಲ, ಗೋಪ್ಯವಾಗಿ ತನ್ನ ಮನೆಯ ದೇವರ ಕೋಣೆಯಲ್ಲಿ ಶ್ರೀರಾಮಕೃಷ್ಣರ ಪಾದಗಳಿಗೆ ಪುಷ್ಪಗಳನ್ನು ಅರ್ಪಿಸಿದ! "ಭಗವಂತನ ಆದೇಶವಿಲ್ಲದೆ ಮಾತಿಗೆ ಬೆಲೆಯಿರುವುದಿಲ್ಲ" ಎಂದು ಶ್ರೀರಾಮಕೃಷ್ಣರೇ ಹೇಳುತ್ತಿರಲಿಲ್ಲವೇ? "ತಾನು ಕೇವಲ ನಿಮಿತ್ತ, ತಾಯಿಯೇ ತನ್ನ ಮೂಲಕ ಎಲ್ಲವನ್ನು ಮಾಡುತ್ತಿರುವಳು" ಎಂಬುದೇ ಶ್ರೀರಾಮಕೃಷ್ಣರ ಭಾವವಾಗಿತ್ತು. ಸಂಪೂರ್ಣವಾಗಿ ಅವರು ತಮ್ಮ 'ಅಹಂ' ಅನ್ನು ನಾಶಮಾಡಿಕೊಂಡಿದ್ದರು.

ರಾಮ, ಕೃಷ್ಣ, ಬುದ್ಧ, ಏಸುಕ್ರಿಸ್ತರ ಸುತ್ತ ಮತಗಳು, ಸಂಪ್ರದಾಯಗಳು ಬೆಳೆದಿವೆ. ಅವತಾರಪುರುಷರು ಅಸಾಧ್ಯವಾದ ಆಧ್ಯಾತ್ಮಿಕ ಶಕ್ತಿಯನ್ನು ಹೊಂದಿದ್ದು ಅನೇಕಾನೇಕ ಸಾಧಕರನ್ನು

ಮುಕ್ತಿಯತ್ತ ಕೊಂಡೊಯ್ಯುತ್ತಾರೆ. ಆದರೆ ಅವರ ಹೆಸರಿನಲ್ಲಿ ಪ್ರಾರಂಭಗೊಂಡ ಮತಗಳು "ನಮ್ಮ ಮಾರ್ಗವೇ ಉತ್ತಮ, ನಮ್ಮ ಧರ್ಮವೇ ಸರಿ" ಎಂಬ ಧೋರಣೆಯನ್ನು ಕಾಲಕ್ರಮೇಣ ಹೊಂದುತ್ತವೆ. ಶ್ರೀರಾಮಕೃಷ್ಣರು ತಂತ್ರಶಾಸ್ತ್ರ, ವೈಷ್ಣವಮತ, ಅದ್ವೈತಮತ, ಶಾಕ್ತಮತಗಳ ಸಾಧನೆಗಳನ್ನು ಮಾಡಿದ್ದಲ್ಲದೆ, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳ ಸಾಧನೆಯನ್ನೂ ಮಾಡಿ, ಎಲ್ಲದರ ಮೂಲಕ ಸಮಾಧಿಯಲ್ಲಿ, ಒಂದೇ ಸಚ್ಚಿದಾನಂದ ಪರಬ್ರಹ್ಮದಲ್ಲಿ ಒಂದಾಗುವ ಅನುಭವವನ್ನು ಹೊಂದಿದ್ದರು. ತಮ್ಮ ಸ್ವಂತ ಅನುಭವದ ಆಧಾರದ ಮೇಲೆ ಎಲ್ಲ ಧರ್ಮಗಳೂ ಮತಗಳೂ ಒಂದೇ ಎಂದು ಸಾರಿದರು. ಎಂತಹ ಪೂರ್ಣದೃಷ್ಟಿ ಹಾಗೂ ಉದಾತ್ತತೆ ಶ್ರೀರಾಮಕೃಷ್ಣರದು!

ಇತರ ಅವತಾರಪುರುಷರ ಜೀವನಗಳೆಲ್ಲ ಕಥೆಗಳಾಗಿ ಹೋಗಿವೆ. ಅನೇಕ ಅದ್ಭುತ ಅತೀಂದ್ರಿಯ ಶಕ್ತಿಗಳನ್ನು ಅವರಿಗೆ ಆರೋಪಿಸಿ, ಅವರ ಬಗ್ಗೆ ದಂತಕಥೆಗಳೂ ಸೇರಿಕೊಂಡಿರುವುದರಿಂದ ಅದರಲ್ಲಿ ಸತ್ಯವೆಷ್ಟು, ಕಲ್ಪನೆಯೆಷ್ಟು ಎಂಬುದು ತಿಳಿದುಬರುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಶ್ರೀರಾಮಕೃಷ್ಣರು ಮಾಡಿದ ಸಾಧನೆಗಳನ್ನು ಅವರ ಸಮಕಾಲೀನರು ಕಂಡು ದಾಖಲಿಸಿದ್ದಾರೆ. ಅವರ ಉಪದೇಶಗಳೆಲ್ಲವೂ 'ವಚನವೇದ'ದಲ್ಲಿ ಶಾಶ್ವತವಾಗಿ ಲಿಪಿಬದ್ಧವಾಗಿವೆ. ಅವರು ನೋಡಲು ಹೇಗಿದ್ದರು ಎಂಬುದನ್ನು ಛಾಯಾಚಿತ್ರದಲ್ಲಿ ಹಿಡಿದಿಡಲಾಗಿದೆ. ಇಲ್ಲಿ ಸಂಶಯ, ಊಹೆ ಹಾಗೂ ಅಂತೆ-ಕಂತೆಗಳಿಗೆ ಆಸ್ಪದವಿಲ್ಲ. ಒಬ್ಬ ಅವತಾರಪುರುಷನ ಬಗ್ಗೆ ಇಷ್ಟೊಂದು ಮಾಹಿತಿ, ಅದೂ ನಂಬಲರ್ಹವಾದ ರೀತಿಯಲ್ಲಿ ದೊರೆತಿರುವುದು ಇದೇ ಮೊದಲನೆಯ ಸಲ ಎನ್ನಬಹುದು.

ಶ್ರೀರಾಮಕೃಷ್ಣರು ಏನನ್ನೂ ತಿರಸ್ಕರಿಸಲಿಲ್ಲ, ಯಾರನ್ನೂ ಅಧಮನೆಂದು ಕರೆಯಲಿಲ್ಲ, ವಿಷಾದ ವ್ಯಕ್ತಪಡಿಸಲಿಲ್ಲ. ಎಲ್ಲರನ್ನೂ ಅವರು ಇದ್ದ ಮಟ್ಟದಿಂದಲೇ ಉದ್ಧರಿಸಲು ಪ್ರಯತ್ನಿಸಿದರು. ಗಿರೀಶನನ್ನು ಕೀಳಾಗಿ ಕಾಣದೆ, ಕುಡಿತವನ್ನು ಬಿಡುವಂತೆ ಉಪದೇಶವನ್ನೂ ನೀಡದೆ ಅವನನ್ನು ಪರಿವರ್ತಿಸಿದರು. ಅವರ ಜೀವನದಲ್ಲಿ ಇಂತಹ ಅನೇಕ ನಿದರ್ಶನಗಳಿವೆ. ಯಾವ ಜಾತೀಯ ಭಾವನೆಯೂ ಅವರಲ್ಲಿರಲಿಲ್ಲ, 'ಭಕ್ತರೆಲ್ಲ ಒಂದು ಜಾತಿ' ಎನ್ನುತ್ತಿದ್ದರು. ಮೇಲು- ಕೀಳು ಎಂಬ ಭಾವನೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ, ಭಗವಂತನಲ್ಲಿ ವ್ಯಾಕುಲತೆ ಹಾಗೂ ಪ್ರೀತಿಗೆ ಪ್ರಾಧಾನ್ಯತೆಯನ್ನೂ ನೀಡಿದರು. ಸಂಸಾರವನ್ನು ದೂಷಿಸದೆ, ಗೃಹಸ್ಥ ಭಕ್ತರಿಗೂ ಮಾರ್ಗದರ್ಶನ ನೀಡಿ ಉತ್ತಮ ಸಾಧಕರನ್ನು ತಯಾರಿಸಿದರು. ನಾಗಮಹಾಶಯರಂತಹ ಗೃಹೀಭಕ್ತರು ಅನುಪಮರಲ್ಲವೇ? ಸಂನ್ಯಾಸ ಹಾಗೂ ಸಂಸಾರಗಳೆಂಬ ಭೇದವನ್ನು ಅಳಿಸಿ ಹಾಕಿ, "ಎಲ್ಲಿದ್ದರೂ ಭಗವಂತನನ್ನು ಆಶ್ರಯಿಸು" ಎಂದು ಉಪದೇಶ ನೀಡಿದರು. "ಅದ್ವೈತವನ್ನು ಸೆರಗಿನಲ್ಲಿ ಕಟ್ಟಿಕೊಂಡು, ಏನು ಬೇಕಾದರೂ ಮಾಡು" ಎಂಬ ಅವರ ಉಪದೇಶ ಎಲ್ಲ ಭೇದಭಾವನೆಯನ್ನೂ ತಳ್ಳಿಹಾಕುತ್ತದೆ.

ಈಗಿನ ವೈಜ್ಞಾನಿಕ ಯುಗಕ್ಕೆ, ಪಾಶ್ಚಾತ್ಯ ಸಂಸ್ಕೃತಿಯ ದುಷ್ಪ್ರಭಾವಗಳನ್ನು ಸಮರ್ಪಕವಾಗಿ ಎದುರಿಸಿ, ಶ್ರದ್ಧೆಯಿಂದ ಭಗವಂತನನ್ನು ಆರಾಧಿಸುವ ಸುಲಭ ಮಾರ್ಗವನ್ನು ತೋರಿಸಿದರು ಶ್ರೀರಾಮಕೃಷ್ಣರು. ಈ ಎಲ್ಲ ಗುಣಗಳನ್ನು ಗುರುತಿಸಿಯೇ ಸ್ವಾಮಿ ವಿವೇಕಾನಂದರು ಅವರನ್ನು 'ಅವತಾರವರಿಷ್ಠ' ಎಂದು ಕರೆದದ್ದು.

ಹಾಗೆ ನೋಡಿದರೆ ಹಿಂದಿನ ಅವತಾರಪುರುಷರು ಎಲ್ಲೋ ಕೆಲವು ಅಸುರರನ್ನು ಸಂಹರಿಸಿದರಷ್ಟೇ. ಶ್ರೀರಾಮಕೃಷ್ಣರು ಪ್ರತಿಯೊಬ್ಬ ಮನುಷ್ಯನಲ್ಲಿರುವ ಸಂಶಯ ರಾಕ್ಷಸನನ್ನು ತಮ್ಮ ನೇರ ಅನುಭವದಿಂದ ನಾಶ ಮಾಡಿದ್ದಾರೆ. ಆಧ್ಯಾತ್ಮಿಕ ರಾಜ್ಯದ ಚಕ್ರವರ್ತಿಯಂತೆ ವಿರಾಜಿಸುತ್ತ ಎಲ್ಲರನ್ನೂ ತಮ್ಮ ಬಳಿಗೆ ಕರೆಯುತ್ತಿದ್ದಾರೆ. ಯಾವ ಮತ, ಯಾವ ಜಾತಿ, ಯಾವ ದೇಶ ಎಂದು ಕೇಳದೆ ಎಲ್ಲರಿಗೂ ತಮ್ಮ ಅನುಭವಾಮೃತವನ್ನು ಧಾರಾಳವಾಗಿ ಈಯುತ್ತ, ಮುಕ್ತಿಯ ಹೆದ್ದಾರಿಯಾಗಿ, ಶಾಂತಿಯ ದೂತರಾಗಿ, ಮಾನವ ಸಮಾಜದ ಆಶಾಕಿರಣವಾಗಿ ಕಂಗೊಳಿಸುತ್ತಿದ್ದಾರೆ. ಅವರ ಕರೆಗೆ ಓಗೊಡುವ ಬನ್ನಿ, ಧನ್ಯರಾಗಿ ನವಜೀವನವನ್ನು ಪಡೆದು ವಿಶ್ವಭ್ರಾತೃತ್ವದ ಸವಿಯನ್ನು ಸವಿಯೋಣ ಬನ್ನಿ. 'ಮತ್ತೊಮ್ಮೆ ಬನ್ನಿ' ಎಂದು ತಮ್ಮ ಬಳಿಗೆ ಬರುತ್ತಿದ್ದವರನ್ನೆಲ್ಲ ಸೆಳೆದ ಶ್ರೀರಾಮಕೃಷ್ಣರ ಕರೆ ಇನ್ನೂ ಮೊಳಗುತ್ತಿದೆ. ನಾವೆಲ್ಲ ಆ ಕರೆಗೆ ಕಿವಿಗೊಟ್ಟು ಉತ್ತಮ ವ್ಯಕ್ತಿಗಳಾಗೋಣ, ಮತಾಂಧತೆ-ಜಾತೀಯತೆಗಳನ್ನು ಮೆಟ್ಟಿ ನಿಲ್ಲೋಣ. **'ಧೀರಃ ತತ್ರ ನ ಮುಹ್ಯತಿ'** – ಧೀರರು ಎಲ್ಲಿಯೂ ಹಿಮ್ಮೆಟ್ಟರು, ಧೀರರಿಗೇ ಆಧ್ಯಾತ್ಮಿಕ ಸಾಮ್ರಾಜ್ಯವನ್ನು ಗೆಲ್ಲಲು ಸಾಧ್ಯ ಎಂದು ಶಾಸ್ತ್ರವೂ ಹೇಳುತ್ತದೆ. ಶ್ರೀರಾಮಕೃಷ್ಣರ ಅನುಭವಗಳ ಬೆಂಬಲ, ಶ್ರೀಮಾತೆಯವರ ಪ್ರೀತಿಯೊಲುಮೆ ಹಾಗೂ ವಿವೇಕಾನಂದರ ವಿಚಾರದೃಷ್ಟಿಯೇ ನಮಗೆ ಆಧಾರ, ಭರವಸೆ. ಹೆದರದೆ ಮುನ್ನಡೆಯುವ ಬನ್ನಿ. ಇದೇ ಇಂದಿನ ಯುಗಧರ್ಮ, ಆಧುನಿಕ ಯುಗದ ಕರೆ, ಮಾನವನ ಅಂತರಂಗದ ದನಿ.

### ವಿಶ್ವವಿಸ್ಮಯ

**ಬರಿಯ ಭೂಮಿಯ ಬೆರಗೆ? ಭೂಮದಚ್ಚರಿ, ವಿಶ್ವ**
**ವಿಸ್ಮಯ ವಿರಾಟ್ ನೀನು, ಗುರುದೇವ! ಪಂಡಿತನೆ,**
**ಪಾಮರನೆ, ಹುಚ್ಚನೇ, ನಗೆಗಾರ ಗಂಭೀರ**
**ಅನುಭಾವಿ ಅವತಾರನೇ, ಮನುಜ ಮಾತ್ರನೇ,**
**ಕಡೆಗೆ ಗಂಡೇ, ಹೆಣ್ಣೆ ? ಅರ್ಥವಾಗದಪಾರ್ಥಿವದ**
**ಗಂಟು! ಸರಳತೆ, ವಿರಳತೆಗಳೆರಡು ಮೇಳವಿಸಿ,**
**ಸಂಕೀರ್ಣ, ಪರಿಪೂರ್ಣವಾದ ಪರಿ! ಅಧ್ಯಾತ್ಮ**
**ಮರ್ಮಕ್ಕೆ ಬರೆದ ಜೀವಂತಭಾಷ್ಯವೆ ನೀನು?**
**ನಿನಗೆ ಸ್ವಾಮಿ ವಿವೇಕರೊಂದು ಕಡೆ, ಶ್ರೀಮಾತೆ-**
**ಯೊಂದು ಕಡೆ ವ್ಯಾಖ್ಯಾನಯುಗಳ! ನಿನ್ನೊಳು ಐಕ್ಯ-**
**ಭುವನದ ಮಹಾಚೇತನಗಳು, ಕಡಲೊಳು ಹೊಳೆಗ-**
**ಳೆಂತಂತೆ! ನೀನು ಬೆಳಕಿನ ಹಣ್ಣು; ಲೋಕದ ಹುಣ್ಣು-**
**ಗಳಿಗಮೃತಭೇಷಜ! ಶೂನ್ಯ ಸಂಪಾದಿಸಿದ ಕಣ್ಣು!**
**ನಿನ್ನ ಕೃಪೆ ಹೊರೆಯುವುದು ಕುರುಡರನು, ಹೆಳವರನು!**

**–ಸಿ.ಪಿ.ಕೆ.**